# ಸಾಧಕನ ಮನಸ್ಸು



✿ ಯಾರು ಹೇಳುತ್ತಾನೊ ತನಗೆ ದೊರಕದು ಅಂತ, ಆತನಿಗೆ ಎಂದಿಗೂ ದೊರಕದು. ಮುಕ್ತಾಭಿಮಾನಿ ಮುಕ್ತನೇ ಆಗುತ್ತಾನೆ; ಬದ್ಧಾಭಿಮಾನಿ ಬದ್ಧನೇ ಆಗುತ್ತಾನೆ. ಯಾರು ದೃಢ ಮನಸ್ಸಿನಿಂದ ಭಾವಿಸುತ್ತಾನೊ ತಾನು ಮುಕ್ತನಾಗಿಬಿಟ್ಟೆ ಅಂತ, ಆತ ಮುಕ್ತನೇ ಆಗಿಬಿಡುತ್ತಾನೆ. ಯಾರು ಹಗಲು ಇರುಳು ತಾನು ಬದ್ಧ, ತಾನು ಬದ್ಧ ಅಂತ ಭಾವಿಸುತ್ತಾನೊ, ಆತ ಬದ್ಧನೇ ಆಗಿಬಿಡುತ್ತಾನೆ.

✿ ಬೇಕಾದಷ್ಟು ವಿಚಾರದಲ್ಲಿ ತೊಡಗು, 'ಅಹಂ' ಎಂಬುದು ಹೋಗುವುದಿಲ್ಲ. 'ಅಹಂ' ಎಂಬುದೇ ಕುಂಭ, ಬ್ರಹ್ಮನೇ ಎಲ್ಲೆಲ್ಲೂ ನೀರೇ ನೀರಾಗಿರುವ ಸಮುದ್ರ ಅಂತ ಇಟ್ಟುಕೊಳ್ಳಿ. ಕುಂಭದ ಒಳಗೂ ಹೊರಗೂ ನೀರು ತುಂಬಿದೆ; ಎಲ್ಲೆಲ್ಲೂ ಬರೀ ನೀರೇ ನೀರು; ಆದರೂ ಕುಂಭ ಎಂಬುದು ಮಾತ್ರ ಇದ್ದೇ ಇರುತ್ತದೆ. ಈ ಕುಂಭವೇ ಭಕ್ತನ 'ಅಹಂ' ಎಂಬುದರ ಸ್ವರೂಪ. ಎಲ್ಲಿಯವರೆಗೆ ಕುಂಭ ಎಂಬುದು ಇರುವುದೊ, ಅಲ್ಲಿಯವರೆಗೆ 'ನಾನು', 'ನೀನು', ಎಂಬುದು ಇದ್ದೇ ಇರುತ್ತದೆ; 'ನೀನು ಪ್ರಭು, ನಾನು ದಾಸ; ನೀನು ಭಗವಂತ, ನಾನು ಭಕ್ತ' ಎಂಬುವೂ ಇದ್ದೇ ಇರುತ್ತವೆ. ಬೇಕಾದಷ್ಟು ವಿಚಾರದಲ್ಲಿ ತೊಡಗು, ಇದು ಹೋಗತಕ್ಕದಲ್ಲ. ಕುಂಭವೇ ಹೋಗಿಬಿಟ್ಟಿತು ಅಂದರೆ ಆಗ ಅದು ಬೇರೆ ಸಮಾಚಾರ.

✿ ಆತ ಮನಸ್ಸಿಗೆ ಅಗೋಚರನೇನೊ ನಿಜ—ಆದರೆ ಶುದ್ಧ ಮನಸ್ಸಿನಲ್ಲಿ ಗೋಚರನಾಗುತ್ತಾನೆ. ಈ ಬುದ್ಧಿಗೇನೊ ಆತ ಗೋಚರನಲ್ಲ—ಆದರೆ ಶುದ್ಧ ಬುದ್ಧಿಗೆ ಗೋಚರನಾಗುತ್ತಾನೆ. ಕಾಮಕಾಂಚನಾಸಕ್ತಿ ನಮ್ಮನ್ನು ಬಿಟ್ಟು ತೊಲಗಿತು ಎಂದರೆ, ಮನಸ್ಸು ಮತ್ತು ಬುದ್ಧಿ ಶುದ್ಧವಾಗಿಬಿಡುತ್ತವೆ. ಆಗ ಶುದ್ಧ ಮನಸ್ಸು ಶುದ್ಧ ಬುದ್ಧಿ ಅನನ್ಯವಾಗಿಬಿಡುತ್ತವೆ. ಆತ ಶುದ್ಧ ಮನಸ್ಸಿಗೆ ಗೋಚರನಾಗುತ್ತಾನೆ. ಋಷಿಗಳು ಮುನಿಗಳು ಆತನ ದರ್ಶನ ಪಡೆಯಲಿಲ್ಲವೇನು? ಅವರು ತಮ್ಮ ವ್ಯಕ್ತಿಚೈತನ್ಯದ ಮೂಲಕ ವಿಭುಚೈತನ್ಯದ ಸಾಕ್ಷಾತ್ಕಾರ ಪಡೆದುಕೊಂಡರು.

✿ ಧ್ಯಾನಜೀವನಕ್ಕೆ ಕಾಲಿಟ್ಟಾಗ ಮೊದಲು ಮೊದಲು ವಿಷಯವಸ್ತುಗಳೆಲ್ಲವೂ ಸಾಧಕನ ಎದುರಿಗೆ ಬಂದು ನಿಲ್ಲುವುವು. ಧ್ಯಾನ ಗಾಢವಾಯಿತು ಅಂದರೆ ಮತ್ತೆ ಅವು ಎದುರಿಗೆ ಬಂದು ನಿಲ್ಲವು;— ಎಲ್ಲೋ ಒಂದು ಕಡೆ ಹೊರಗೆ ಬಿದ್ದಿರುತ್ತವೆ.

✿ ಧ್ಯಾನದ ಸಮಯದಲ್ಲಿ ಮನಸ್ಸು ಅಂಥ ಏಕಾಗ್ರತೆಯನ್ನು ಹೊಂದಿರುತ್ತದೆ. ಆಗ ಏನನ್ನು ನೋಡುವುದಕ್ಕೂ ಆಗುವುದಿಲ್ಲ. ಕೇಳುವುದಕ್ಕೂ ಆಗುವುದಿಲ್ಲ. ಸ್ಪರ್ಶದ ಬೋಧೆ ಕೂಡ ಆಗುವುದಿಲ್ಲ. ಹಾವು ಮೈಮೇಲೆ ಹರಿದುಹೋದರೂ ಅದು ಗೊತ್ತಾಗುವುದೇ ಇಲ್ಲ. ಧ್ಯಾನಸ್ಥನಿಗೆ ಹಾವು ತನ್ನ ಮೈಮೇಲೆ ಹರಿದು ಹೋದುದು ಗೊತ್ತಾಗದು. ಅದೇ ರೀತಿ ಹಾವಿಗೂ ತಾನು ಮನುಷ್ಯನ ದೇಹದ ಮೇಲೆ ಹರಿದು ಹೋಗುತ್ತಿದ್ದೇನೆ ಎಂಬ ಭಾವನೆಯೇ ಉಂಟಾಗದು.

✿ ಗಾಢಧ್ಯಾನದಲ್ಲಿ ಇಂದ್ರಿಯವ್ಯಾಪಾರ ಸಂಪೂರ್ಣವಾಗಿ ನಿಂತುಹೋಗಿಬಿಡುತ್ತದೆ. ಆಗ ಮನಸ್ಸು ಬಹಿರ್ಮುಖವಾಗಿರದು. ಇದು ಬೀದಿ ಬಾಗಿಲನ್ನು ಹಾಕಿ ಒಳಗೆ ಕುಳಿತಂತೆ. ಇಂದ್ರಿಯಗಳ ಐದೂ ವಸ್ತುಗಳೂ ರೂಪ, ರಸ, ಗಂಧ, ಸ್ಪರ್ಶ, ಶಬ್ದ — ಜಗಲಿ ಮೇಲೆ ಬಿದ್ದಿರಬೇಕಾಗುತ್ತದೆ.

✿ ಸಚ್ಚಿದಾನಂದ ಎಂಬುದು ಒಂದು ಮಹಾ ಸಾಗರವಿದ್ದ ಹಾಗೆ. ಅದರೊಳಗೆ 'ಅಹಂ' ಎಂಬ ಘಟ ಮುಳುಗಿಕೊಂಡಿದೆ. ಘಟ ಎಂಬುದು ಎಲ್ಲಿಯವರೆಗೆ ಇರುವುದೊ, ಅಲ್ಲಿಯವರೆಗೆ ನೀರು ಇಬ್ಭಾಗವಾಗಿರುವಂತೆ ಕಾಣುತ್ತದೆ; ನೀರಿನ ಒಂದು ಭಾಗ ಘಟದೊಳಗೆ, ಇನ್ನೊಂದು ಭಾಗ ಘಟದ ಹೊರಗೆ. ಆದರೆ, ಘಟ ಎಂಬುದು ಒಡೆದು ಪುಡಿಪುಡಿಯಾಯಿತು ಎಂದರೆ ಆಗ ಉಳಿಯುವುದು ಒಂದೇ ಒಂದು ಅನಂತ ಜಲರಾಶಿ. ಅದು ಒಂದೇ ಒಂದು ಅನಂತ ಜಲರಾಶಿ ಅಂತಲೂ ಹೇಳುವುದಕ್ಕೆ ಆಗುವುದಿಲ್ಲ. ಹಾಗೆ ಹೇಳಲು ಯಾರು ತಾನೆ ಉಳಿದುಕೊಂಡಿರುತ್ತಾರೆ?

✿ ನಿಜವಾದ ಜ್ಞಾನ ದೊರೆತ ಮೇಲೂ 'ಅಹಂ' ಎಂಬುದು ಉಳಿದುಕೊಂಡಿರುವುದಾದರೆ, ಅದು ಕೇವಲ 'ವಿದ್ಯೆಯ ಅಹಂ', 'ಭಕ್ತಿಯ ಅಹಂ', 'ದಾಸನ ಅಹಂ' ಮಾತ್ರವೆ. ಅದು 'ಅವಿದ್ಯೆಯ ಅಹಂ' ಅಲ್ಲ.

✿ ಜ್ಞಾನ ಭಕ್ತಿ ಎರಡೂ ಮಾರ್ಗಗಳೇ. ಯಾವ ಮಾರ್ಗದಿಂದ ಹೋದರೂ ಭಗವಂತನನ್ನು ಪಡೆಯಬಹುದು. ಭಗವಂತನನ್ನು ಜ್ಞಾನಿ ಒಂದು ದೃಷ್ಟಿಯಿಂದ ನೋಡುತ್ತಾನೆ. ಭಕ್ತ ಇನ್ನೊಂದು ದೃಷ್ಟಿಯಿಂದ ನೋಡುತ್ತಾನೆ. ಜ್ಞಾನಿಯ ಭಗವಂತ ತೇಜೋಮಯ, ಭಕ್ತನ ಭಗವಂತ ರಸಮಯ.

✿ ಭಗವಂತನೊಬ್ಬನೇ ಕೇವಲ ಸತ್ಯ, ಆತನ ಪಾದಪದ್ಮಗಳಲ್ಲಿ ಭಕ್ತಿಯನ್ನು ಬೆಳೆಸಿಕೊಳ್ಳುವ ಬಗೆ ಹೇಗೆ, ಆತನ ಸಾಕ್ಷಾತ್ಕಾರವನ್ನು ಹೊಂದಲು ಉಪಾಯವೇನು ಎಂಬುವುಗಳ ಕಡೆ ನಿನ್ನ ಮನಸ್ಸನ್ನು ತಿರುಗಿಸು. ಸುಮ್ಮನೆ ಶೋಕಪಟ್ಟರೆ ಏನು ದೊರೆಯುತ್ತದೆ?

ಶ್ರೀರಾಮಕೃಷ್ಣ ವಚನವೇದದಿಂದ